ಕೊಡಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ಬಟ್ಟೆಗೆ ಇತರೇ ಖರ್ಚು ನೀವೇ ಕೊಡುವಂತಾಗಬೇಕು. ಇನ್ನು ಅಂಗನವಾಡಿಗಳು ಇರುವಂತಾದ್ದು ಚಾಮರಾಜನಗರ ಜಿಲ್ಲೆಯಲ್ಲಿ. ಅದು ವಿಪರೀತ ಗಲೀಜು ಇರುವಂಥ ಪ್ರದೇಶ ಏನೋ ಜಾಸ್ತಿ ಅಂಗನವಾಡಿಗಳನ್ನು ಕೊಡಬೇಕೆಂದು ಕೊಟ್ಟಿದ್ದಾರೆ, ಅವುಗಳಿಗೆ ಬಿಲ್ಡಿಂಗ್ ಕೊಡುವಂತಾದ್ದು ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಐಸಿಡಿಎಸ್ ಸ್ಕೀಮಿನ ಬಗ್ಗೆ ಹೇಳ ಬೇಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅರ್ಧ ತಾಲ್ಲೂಕುಗಳಿಗೆ ವಿಸ್ತರಣೆ ಆಗಿಲ್ಲ. ಅವರ ಲೆಕ್ಕದ ಪ್ರಕಾರವೇ ಹೇಳುವುದಾದರೆ ಪೂರ್ತಿ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಣೆಯಾಗಬೇಕು. ಈಗ ಅರ್ಧ ತಾಲ್ಲೂಕುಗಳಿಗೆ ವಿಸ್ತರಣೆಯಾಗಿರುವುದರಿಂದ ಪೂರ್ತಿ ತಾಲ್ಲೂಕುಗಳನ್ನು ಕವರ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಐಸಿಡಿಎಸ್ ನಲ್ಲಿ ಮಕ್ಕಳದು ಒಂದೇ ಅಲ್ಲ ಬರುವುದು, ಮಂಹಿಳೆಯರ ಕಲ್ಯಾಣ ಕೂಡ ಬರುತ್ತದೆ, ಪ್ರಗ್‌ನೆಂಟ್ ಲೆಡೀಸ್‌ಗೆ ಫೆಸಲಿಟೀಸ್ ಕೊಡಬೇಕೆಂದು ಇದೆ. ಅದನ್ನು ಇವರು ಪೂರ್ತಿ ಮರೆತು ಹೋಗಿದ್ದಾರೆ. ಅವರುಗಳಿಗೆ ಡಾಕ್ಟರುಗಳು ಸಕಾಲದಲ್ಲಿ ಅಟೆಂಡ್ ಮಾಡಿ ನೋಡ ಬೇಕೆಂದು ಇದೆ, ಆ ಸ್ಕೀಮಿನ ಒರಿಜಿನಲ್ ಐಡಿಯಾ ಏನಿದೆ ಅದು ಬಿಟ್ಟು ಹೋಗುತ್ತಿದೆ. ಪ್ರಗ್‌ನೆಂಟ್ ವುಮೆನ್ ಏನಿದ್ದಾರೆ ಅವರಿಗೆ ಮೆಡಿಕಲ್ ಫೆಸಿಲಿಟೀಸ್ ಕೊಡಬೇಕೆಂದು ಏನಿದೆ ಅದನ್ನು ಮರೆತಿದ್ದಾರೆ. ಮಕ್ಕಳಿಗೆ ಮೆಡಿಕಲ್ ಫೆಸಿಲಿಟೀಸ್ ಕೊಡಬೇಕೆಂದು ಏನಿದೆ ಅದನ್ನು ಮರೆತಿದ್ದಾರೆ. ಮುಂದೆ ಇದು ಪೂರ್ತಿಯಾಗಿ ಅನುಷ್ಠಾನವಾಗುವಂತೆ ಮಾಡಿ ಆ ಬಡ ಜನತೆಗೆ ಸಹಾಯ ಮಾಡಬೇಕು. ಐಸಿಡಿಎಸ್ ಸ್ಕೀಮ್ ತುಂಬಾ ಒಳ್ಳೆಯದು ಅದನ್ನು ಎಲ್ಲಾ ಹಳ್ಳಿಗಳಿಗೂ ವಿಸ್ತರಣೆ ಮಾಡಿ ಎಲ್ಲಾ ಮಕ್ಕಳನ್ನು ಅದರಲ್ಲಿ ಕವರ್ ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—''ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.—
''ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ
ನಿಯಮ ೯೯ರ ಮೇರೆಗೆ, ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾದ
೧೯೮೮ನೇ ಇಸವಿಯ ಕರ್ನಾಟಕ ಕಾನೂನು ಸಲಹಾ ಮಂಡಲಿ (ತಿದ್ದುಪಡಿ)
ವಿಧೇಯಕವನ್ನು ವಿಧಾನ ಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ.''

೬-೦೦ ಪಿ.ಎಂ.

ಅಧ್ಯಕ್ಷರು.—ಇನ್ನು ಅರ್ಧ ಗಂಟೆ ಕಾಲಾವಧಿಯ ಚರ್ಚೆ. ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಗೈರುಹಾಜರಿದ್ದಾರೆ. ಆದ್ದರಿಂದ ಸಭೆಯನ್ನು ನಾಳೆ ಬೆಳಿಗ್ಗೆ ೯-೩೦ ಗಂಟೆಗೆ ಮುಂದೂಡಲಾಗಿದೆ.

(ಸದನವು ಆರು ಗಂಟೆ ಒಂದು ನಿಮಿಷಕ್ಕೆ ಮುಕ್ತಾಯವಾಗಿ ಪುನ: ದಿನಾಂಕ ೧೦ನೇ ಜೂನ್ ೧೯೮೮ರ ಶುಕ್ರವಾರದಂದು ೯-೩೦ ಗಂಟೆಗೆ ಸೇರಲು ನಿಶ್ಚಯಿಸಿತು.)